# ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110

ದೂ. : 080–29566001, 080–27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in


## "ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪತ್ರ"

**ವಿಷಯ:** ಯಲಹಂಕ ತಾಲ್ಲೂಕು, ಜಾಲ ಹೋಬಳಿ, ದೊಡ್ಡಜಾಲ ಗ್ರಾಮದ ಸ.ನಂ 104/6 ರಲ್ಲಿ 0ಎ–09ಗು, 106/8 ರಲ್ಲಿ 0ಎ–1.08ಗು ಹಾಗೂ 105/4 ರಲ್ಲಿ 0ಎ–10ಗು, ದೊಡ್ಡಜಾಲ ಅಮಾನಿಕೆರೆ ಗ್ರಾಮದ ಸ.ನಂ. 66/2 ರಲ್ಲಿ 1ಎ–22ಗು, 66/3 ರಲ್ಲಿ 0ಎ–29ಗು, 67/1 ರಲ್ಲಿ 0ಎ–28.08ಗು, 67/2 ರಲ್ಲಿ 0ಎ–13ಗು, 67/3 ರಲ್ಲಿ 0ಎ–15.08ಗು, 72/1 ರಲ್ಲಿ 0ಎ–19ಗು, 72/2 ರಲ್ಲಿ 0ಎ–19ಗು, 72/3 ರಲ್ಲಿ 0ಎ–19ಗು ಮತ್ತು 72/4 ರಲ್ಲಿ 0ಎ–19ಗು ಒಟ್ಟು 6ಎ–04.08ಗು ಅಥವಾ 24736.06 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ)ರ ಅಡಿಯಲ್ಲಿ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ಕೋರಿರುವ ಬಗ್ಗೆ.

**ಉಲ್ಲೇಖ:**

1. ಶ್ರೀ ಶ್ರೀರಾಂ ಮಹೇಶ್ ಬಾಬು ಬಿನ್ ಬಾಲ ಸುಬ್ಬರಾಯುಡು, ಎಸ್.ಎಸ್.ಇ ಪ್ರಾಜೆಕ್ಟ್ಸ್ ಪ್ರೈ.ಲಿ. ರವರ ಪರವಾಗಿ ನಿರ್ದೇಶಕರು ಶ್ರೀ ಶ್ರೀರಾಂ ಮಹೇಶ್ ಬಾಬು ಬಿನ್ ಬಾಲ ಸುಬ್ಬರಾಯುಡು, ಶ್ರೀ ಎನ್. ಶಿವಣ್ಣ ಬಿನ್ ಲೇ॥ ನಾರಾಯಣಸ್ವಾಮಿ ರವರ ಪರವಾಗಿ ಜಿಪಿಎದಾರರು/ ಜಂಟಿ ಅಭಿವೃದ್ಧಿದಾರರಾದ ಎಸ್.ಎಸ್.ಇ ಪ್ರಾಜೆಕ್ಟ್ಸ್ ಪ್ರೈ.ಲಿ. ರವರ ಪರವಾಗಿ ನಿರ್ದೇಶಕರು ಶ್ರೀ ಶ್ರೀರಾಂ ಮಹೇಶ್ ಬಾಬು ಬಿನ್ ಬಾಲ ಸುಬ್ಬರಾಯುಡು ರವರುಗಳ ಅರ್ಜಿ ಸಂಖ್ಯೆ 4881, ದಿನಾಂಕ: 21/08/2024.
2. ಈ ಪ್ರಾಧಿಕಾರದ ಭೂಉಪಯೋಗ ನಿಗದಿಪಡಿಸಿರುವ ಆದೇಶ ಸಂಖ್ಯೆ: ಬಿಐಎಪಿಎ/ಟಿಪಿ/ಭೂಉನಿ/13/2022–23/2023–24/1420, ದಿನಾಂಕ: 04/10/2023.
3. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎ.ಎಲ್.ಎನ್.(ಜಾಲ) ಎಸ್.ಆರ್. 34/2014–15, ದಿನಾಂಕ: 02/02/2015 (ಸ.ನಂ 104/6), ನಂ. 675860, ದಿನಾಂಕ: 31/07/2024 (ಸ.ನಂ 106/8), ನಂ: 5629761, ದಿನಾಂಕ: 28/03/2024 (ಸ.ನಂ 105/4), ನಂ. 629754, ದಿನಾಂಕ: 02/04/2024 (ಸ.ನಂ 66/2), ನಂ. 629760, ದಿನಾಂಕ: 28/03/2024 (ಸ.ನಂ 66/3), ನಂ. 629773, ದಿನಾಂಕ: 28/03/2024 (ಸ.ನಂ 67/1), ನಂ. 629757, ದಿನಾಂಕ: 28/03/2024 (ಸ.ನಂ 67/2), ನಂ. 629772, ದಿನಾಂಕ: 28/03/2024 (ಸ.ನಂ 67/3) & ನಂ. 629747, ದಿನಾಂಕ: 28/03/2024 (ಸ.ನಂ 72/1).
4. ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡುವ ಸಂಬಂಧ ಪೂರ್ವ ಸಮ್ಮತಿಗಾಗಿ ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರಿಗೆ ಕಡತ ಸಲ್ಲಿಸಿದ ದಿನಾಂಕ: 03/09/2024.
5. ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರು ಸಮ್ಮತಿ ನೀಡಿದ ದಿನಾಂಕ: 10/09/2024
6. ದಿನಾಂಕ: 19/09/2024 ರಂದು ನಡೆದ ಪ್ರಾಧಿಕಾರದ 143 ನೇ ಸಭೆಯ ವಿಷಯ ಸಂ. 143.76 ರ ನಡಾವಳಿ.
7. ಈ ಪ್ರಾಧಿಕಾರದ ಸಮ ಸಂಖ್ಯೆ ಶುಲ್ಕ ಪಾವತಿ ಸೂಚನಾ ಪತ್ರ ದಿನಾಂಕ: 30/09/2024.
8. ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ: 0013696, ದಿನಾಂಕ:

15/10/2024 ರಂತೆ ಒಟ್ಟು ರೂ. 14,21,690–00 (ಹದಿನಾಲ್ಕು ಲಕ್ಷದ ಇಪ್ಪತ್ತೊಂದು ಸಾವಿರದ ಆರು ನೂರ ತೊಂಬತ್ತು ರೂಪಾಯಿಗಳು ಮಾತ್ರ) ರಂತೆ ಶುಲ್ಕಗಳನ್ನು ಪಾವತಿಸಿರುತ್ತಾರೆ.

9. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು ದಿನಾಂಕ: 10/09/2015 ಮತ್ತು ಡಿಪಿಎಎಲ್ 36 ಶಾಸನ 2021, ಬೆಂಗಳೂರು ದಿನಾಂಕ:07/10/2021.

* * * * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಅರ್ಜಿಯಲ್ಲಿ ಶ್ರೀ ಶ್ರೀರಾಂ ಮಹೇಶ್ ಬಾಬು ಬಿನ್ ಬಾಲ ಸುಬ್ಬರಾಯುಡು, ಎಸ್.ಎಸ್.ಇ ಪ್ರಾಜೆಕ್ಟ್ಸ್ ಪ್ರೈ.ಲಿ. ರವರ ಪರವಾಗಿ ನಿರ್ದೇಶಕರು ಶ್ರೀ ಶ್ರೀರಾಂ ಮಹೇಶ್ ಬಾಬು ಬಿನ್ ಬಾಲ ಸುಬ್ಬರಾಯುಡು, ಶ್ರೀ ಎನ್. ಶಿವಣ್ಣ ಬಿನ್ ಲೇ॥ ನಾರಾಯಣಸ್ವಾಮಿ ರವರ ಪರವಾಗಿ ಜಿಪಿಎದಾರರು/ ಜಂಟಿ ಅಭಿವೃದ್ಧಿದಾರರಾದ ಎಸ್.ಎಸ್.ಇ ಪ್ರಾಜೆಕ್ಟ್ಸ್ ಪ್ರೈ.ಲಿ. ರವರ ಪರವಾಗಿ ನಿರ್ದೇಶಕರು ಶ್ರೀ ಶ್ರೀರಾಂ ಮಹೇಶ್ ಬಾಬು ಬಿನ್ ಬಾಲ ಸುಬ್ಬರಾಯುಡು ರವರುಗಳು ಯಲಹಂಕ ತಾಲ್ಲೂಕು, ಜಾಲ ಹೋಬಳಿ, ದೊಡ್ಡಜಾಲ ಗ್ರಾಮದ ಸ.ನಂ 104/6 ರಲ್ಲಿ 0ಎ–09ಗು, 106/8 ರಲ್ಲಿ 0ಎ–1.08ಗು ಹಾಗೂ 105/4 ರಲ್ಲಿ 0ಎ–10ಗು, ದೊಡ್ಡಜಾಲ ಅಮಾನಿಕೆರೆ ಗ್ರಾಮದ ಸ.ನಂ. 66/2 ರಲ್ಲಿ 1ಎ–22ಗು, 66/3 ರಲ್ಲಿ 0ಎ–29ಗು, 67/1 ರಲ್ಲಿ 0ಎ–28.08ಗು, 67/2 ರಲ್ಲಿ 0ಎ–13ಗು, 67/3 ರಲ್ಲಿ 0ಎ–15.08ಗು, 72/1 ರಲ್ಲಿ 0ಎ–19ಗು, 72/2 ರಲ್ಲಿ 0ಎ–19ಗು, 72/3 ರಲ್ಲಿ 0ಎ–19ಗು ಮತ್ತು 72/4 ರಲ್ಲಿ 0ಎ–19ಗು ಒಟ್ಟು 6ಎ–04.08ಗು ಅಥವಾ 24736.06 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ) ರ ಅಡಿಯಲ್ಲಿ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ಕೋರಿರುತ್ತಾರೆ.

ಪ್ರಶ್ನಿತ ಜಮೀನುಗಳು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರದೇಶದ ಅನುಮೋದಿತ ಮಹಾಯೋಜನೆಯಲ್ಲಿ ವಸತಿ, ಉದ್ಯಾನವನ/ಬಯಲು ಜಾಗ ಹಾಗೂ 18.0 ಮೀ ಅಗಲದ ಮಹಾಯೋಜನೆಯ ಪ್ರಸ್ತಾಪಿತ ರಸ್ತೆ ಪಂಕ್ತೀಕರಣ ಭೂಉಪಯೋಗ ವಲಯದಲ್ಲಿ ಇರುತ್ತದೆ. ಉಲ್ಲೇಖ (2) ರ ಭೂಉಪಯೋಗ ನಿಗಧಿಪಡಿಸುವ ಪ್ರಾರಂಭಿಕ ಪ್ರಮಾಣ ಪತ್ರದಲ್ಲಿ ಪ್ರಶ್ನಿತ ಜಮೀನುಗಳ ಪೈಕಿ ವಸತಿ ವಲಯದಲ್ಲಿರುವ 104/6 ರ ಜಮೀನನ್ನು ಹೊರತುಪಡಿಸಿ ಉದ್ಯಾನವನ ವಲಯದಲ್ಲಿರುವ ಉಳಿಕೆ ಜಮೀನುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4) ರ ಅಡಿಯಲ್ಲಿ ಉದ್ಯಾನವನ/ಬಯಲು ಜಾಗ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ನಿಗಧಿಪಡಿಸಲಾಗಿರುತ್ತದೆ. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರಿಂದ ಉಲ್ಲೇಖ (3) ರ ಅಧಿಕೃತ ಜ್ಞಾಪನ ಪತ್ರಗಳಂತೆ ವಸತಿ ಹಾಗೂ ರಸ್ತೆ ಉದ್ದೇಶಕ್ಕಾಗಿ ಭೂಪರಿವರ್ತನೆಯಾಗಿರುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ : ಯುಡಿಡಿ234ಬಿಎಂಆರ್2023, ದಿನಾಂಕ: 20/11/2023 ರಂತೆ ಅನುಮೋದನೆಯಾದ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ನಿಯಮಗಳು 2020 ರಲ್ಲಿನ ನಿಯಮ 18 (5) ರನ್ವಯ ಮತ್ತು ದಿನಾಂಕ: 27/12/2023 & 03/02/2024 ರಂದು ಮಹಾನಗರ ಆಯುಕ್ತರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಇವರು ಅಧಿಕೃತ ಜ್ಞಾಪನಾ ಪತ್ರದಲ್ಲಿ ಸೂಚಿಸಿರುವಂತೆ ಸದರಿ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡುವ ಸಂಬಂಧ ಪೂರ್ವ ಸಮ್ಮತಿಗಾಗಿ ಉಲ್ಲೇಖ (4) ರಲ್ಲಿ ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರನ್ನು ಕೋರಲಾಗಿದ್ದು, ಉಲ್ಲೇಖ (5) ರಂತೆ ಮಹಾನಗರ ಯೋಜಕರು, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ರವರು ಹಲವು ಷರತ್ತುಗಳಿಗೆ ಒಳಪಟ್ಟು ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ಸಮ್ಮತಿ ನೀಡಿರುತ್ತಾರೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ24 ಶಾಸನ2015, ದಿನಾಂಕ: 10/09/2015 ರನ್ವಯ ಕಾಯ್ದೆಗೆ ತಿದ್ದುಪಡಿಯಾಗಿರುವಂತೆ ಕೆಟಿಸಿಪಿ ಕಾಯ್ದೆ 1961 ರ ಪ್ರಕರಣ 17(2)(ಎ) ರಂತೆ ಸದರಿ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡುವ ಸಂಬಂಧ ಉಲ್ಲೇಖ (6) ರ ದಿನಾಂಕ: 19/09/2024 ರಂದು ನಡೆದ

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110
ದೂ. : 080-29566001, 080-27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

ಪ್ರಾಧಿಕಾರದ 143 ನೇ ಸಭೆಯ ವಿಷಯ ಸಂ. 143.76 ರ ನಡಾವಳಿಯಲ್ಲಿ ಅರ್ಜಿದಾರರು ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಯಂತೆ ವಿವಿಧ ಭೂಉಪಯೋಗಗಳ ವಿವರಗಳು ಈ ಕೆಳಕಂಡಂತೆ ಇರುವುದನ್ನು ಸಭೆಯಲ್ಲಿ ಗಮನಿಸಲಾಯಿತು.

| ಕ್ರ ಸಂ | ಭೂಉಪಯೋಗ ವಿವರ | ನಕ್ಷೆಯ ರೀತ್ಯ | | ವಲಯ ನಿಯಮಾವಳಿ ರೀತ್ಯ ಶೇಕಡಾವಾರು |
|---|---|---|---|---|
| | | ವಿಸ್ತೀರ್ಣ ಚ.ಮೀ. ನಲ್ಲಿ | ಶೇಕಡಾವಾರು | |
| 1. | ವಸತಿಗಾಗಿ | 11984.03 | 48.45 | ಗರಿಷ್ಠ ಶೇ. 55 |
| 2. | ವಾಣಿಜ್ಯಕ್ಕಾಗಿ | 665.38 | 2.69 | |
| 3. | ಉದ್ಯಾನವನಕ್ಕಾಗಿ | 2588.92 | 10.47 | ಕನಿಷ್ಠ ಶೇ. 10 |
| 4. | ನಾಗರೀಕ ಸೌಲಭ್ಯಕ್ಕಾಗಿ | 1244.04 | 5.03 | ಕನಿಷ್ಠ ಶೇ. 05 |
| 5. | ರಸ್ತೆ | 8253.69 | 33.36 | – |
| | **ಒಟ್ಟು** | **24736.06** | **100** | |

ಚರ್ಚೆಯ ನಂತರ, ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಯು ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುವುದರಿಂದ ಯಲಹಂಕ ತಾಲ್ಲೂಕು, ಜಾಲ ಹೋಬಳಿ, ದೊಡ್ಡಜಾಲ ಗ್ರಾಮದ ಸ.ನಂ 104/6 ರಲ್ಲಿ 0ಎ-09ಗು, 106/8 ರಲ್ಲಿ 0ಎ-1.08ಗು ಹಾಗೂ 105/4 ರಲ್ಲಿ 0ಎ-10ಗು, ದೊಡ್ಡಜಾಲ ಅಮಾನಿಕೆರೆ ಗ್ರಾಮದ ಸ.ನಂ. 66/2 ರಲ್ಲಿ 1ಎ-22ಗು, 66/3 ರಲ್ಲಿ 0ಎ-29ಗು, 67/1 ರಲ್ಲಿ 0ಎ-28.08ಗು, 67/2 ರಲ್ಲಿ 0ಎ-13ಗು, 67/3 ರಲ್ಲಿ 0ಎ-15.08ಗು, 72/1 ರಲ್ಲಿ 0ಎ-19ಗು, 72/2 ರಲ್ಲಿ 0ಎ-19ಗು, 72/3 ರಲ್ಲಿ 0ಎ-19ಗು ಮತ್ತು 72/4 ರಲ್ಲಿ 0ಎ-19ಗು ಒಟ್ಟು 6ಎ-04.08ಗು ಅಥವಾ 24736.06 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ) ರ ಅಡಿಯಲ್ಲಿ ಪ್ರಾಧಿಕಾರದ ಸಾಮಾನ್ಯ ಷರತ್ತುಗಳಿಗೆ ಒಳಪಡಿಸಿ, ವಸತಿ ವಿನ್ಯಾಸ ನಕ್ಷೆಗೆ "Demarcation & Development" ಉದ್ದೇಶಕ್ಕೆ ತಾತ್ಕಾಲಿಕ ಅನುಮೋದನೆಯನ್ನು ನೀಡಲು ತೀರ್ಮಾನಿಸಲಾಯಿತು. ಹಾಗೂ ಅರ್ಜಿದಾರರು ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ಮೊದಲನೇ ಹಂತದ ಶೇ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಇಚ್ಛಿಸಿದ್ದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17(2)(ಸಿ) ರ ಅಡಿಯಲ್ಲಿ ಮೊದಲನೇ ಹಂತದ ಶೇ 40 ರಷ್ಟು ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆ ಮಾಡಲು ಸಹ ತೀರ್ಮಾನಿಸಲಾಗಿರುತ್ತದೆ.

ಪ್ರಾಧಿಕಾರದ ಸಭೆಯ ನಡಾವಳಿಯ ರೀತ್ಯ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡುವ ಸಂಬಂಧ ಉಲ್ಲೇಖ (7) ರ ಈ ಕಛೇರಿಯ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ ಶುಲ್ಕಗಳನ್ನು ಪಾವತಿಸುವಂತೆ ಹಾಗೂ ವಸತಿ ವಿನ್ಯಾಸ ನಕ್ಷೆಯ ನೀಲಿ ಪ್ರತಿಗಳನ್ನು ಸಲ್ಲಿಸುವಂತೆ ಸೂಚಿಸಲಾಗಿರುವ ಹಿನ್ನಲೆಯಲ್ಲಿ ಅರ್ಜಿದಾರರು ಪ್ರಾಧಿಕಾರಕ್ಕೆ ಉಲ್ಲೇಖ (8) ರಂತೆ ನಿಗಧಿತ ಶುಲ್ಕಗಳನ್ನು ಪಾವತಿಸಿ, ವಸತಿ ವಿನ್ಯಾಸ ನಕ್ಷೆಯ ನೀಲಿ ಪ್ರತಿಗಳನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಮೇಲ್ಕಂಡ ಅಂಶಗಳನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/157/ಬಿಎಂಆರ್/2005 ದಿನಾಂಕ: 27/01/2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29/01/2009 ರಲ್ಲಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅನುಮೋದನೆಗೊಂಡಿರುವ ಮಹಾಯೋಜನೆಯ ವಲಯ ನಿಯಮಾವಳಿಗಳ ಅನುಸಾರ, ಉಲ್ಲೇಖ (6) ರ ಪ್ರಾಧಿಕಾರದ ಸಭೆಯ ನಡಾವಳಿಯ ರೀತ್ಯ ಹಾಗೂ ಉಲ್ಲೇಖ (9) ರ ಸರ್ಕಾರದ ಅಧಿಸೂಚನೆಯನ್ವಯ, ಯಲಹಂಕ ತಾಲ್ಲೂಕು, ಜಾಲ ಹೋಬಳಿ, ದೊಡ್ಡಜಾಲ ಗ್ರಾಮದ ಸ.ನಂ 104/6 ರಲ್ಲಿ 0ಎ-09ಗು, 106/8 ರಲ್ಲಿ 0ಎ-1.08ಗು ಹಾಗೂ 105/4 ರಲ್ಲಿ 0ಎ-10ಗು, ದೊಡ್ಡಜಾಲ ಅಮಾನಿಕೆರೆ ಗ್ರಾಮದ ಸ.ನಂ. 66/2 ರಲ್ಲಿ 1ಎ-22ಗು, 66/3 ರಲ್ಲಿ 0ಎ-29ಗು, 67/1 ರಲ್ಲಿ 0ಎ-28.08ಗು, 67/2 ರಲ್ಲಿ 0ಎ-13ಗು, 67/3 ರಲ್ಲಿ 0ಎ-15.08ಗು, 72/1 ರಲ್ಲಿ 0ಎ-19ಗು, 72/2 ರಲ್ಲಿ 0ಎ-19ಗು, 72/3 ರಲ್ಲಿ 0ಎ-19ಗು ಮತ್ತು 72/4 ರಲ್ಲಿ 0ಎ-19ಗು ಒಟ್ಟು 6ಎ-04.08ಗು ಅಥವಾ

24736.06 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ) ರನ್ವಯ ಈ ಕೆಳಕಂಡಂತೆ ವಸತಿ ವಿನ್ಯಾಸ ನಕ್ಷೆಗೆ "ತಾತ್ಕಾಲಿಕ ಅನುಮೋದನೆ" ನೀಡಲು ಆದೇಶಿಸಲಾಗಿದೆ.

## ಆದೇಶ

**ಆದೇಶ ಸಂಖ್ಯೆ : ಬಿಐಎಪಿಎ/ಟಿಪಿ/ಎಲ್‌ಎಒ/55/2024-25** 1840 **ದಿನಾಂಕ:** - 5 NOV 2024

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ರ ಕಲಂ 17(2) (ಎ) ರಡಿಯಲ್ಲಿ ಯಲಹಂಕ ತಾಲ್ಲೂಕು, ಜಾಲ ಹೋಬಳಿ, ದೊಡ್ಡಜಾಲ ಗ್ರಾಮದ ಸ.ನಂ 104/6 ರಲ್ಲಿ 0ಎ-09ಗು, 106/8 ರಲ್ಲಿ 0ಎ-1.08ಗು ಹಾಗೂ 105/4 ರಲ್ಲಿ 0ಎ-10ಗು, ದೊಡ್ಡಜಾಲ ಅಮಾನಿಕೆರೆ ಗ್ರಾಮದ ಸ.ನಂ. 66/2 ರಲ್ಲಿ 1ಎ-22ಗು, 66/3 ರಲ್ಲಿ 0ಎ-29ಗು, 67/1 ರಲ್ಲಿ 0ಎ-28.08ಗು, 67/2 ರಲ್ಲಿ 0ಎ-13ಗು, 67/3 ರಲ್ಲಿ 0ಎ-15.08ಗು, 72/1 ರಲ್ಲಿ 0ಎ-19ಗು, 72/2 ರಲ್ಲಿ 0ಎ-19ಗು, 72/3 ರಲ್ಲಿ 0ಎ-19ಗು ಮತ್ತು 72/4 ರಲ್ಲಿ 0ಎ-19ಗು ಒಟ್ಟು 6ಎ-04.08ಗು ಅಥವಾ 24736.06 ಚ.ಮೀ ವಿಸ್ತೀರ್ಣ ಪ್ರದೇಶವನ್ನು ಮಟ್ಟ ಮಾಡುವುದು, ನೆಲಗಟ್ಟೆ ಹಾಸುವುದು, ಜಲ್ಲಿಕಲ್ಲನ್ನು ಹಾಸುವುದು, ಕಲ್ಲುಚಪ್ಪಡಿ ಹಾಕುವುದು, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಮೋರಿಗಳ ನಿರ್ಮಾಣ, ಬೀದಿ ದೀಪದ ವ್ಯವಸ್ಥೆ ಮತ್ತು ನೀರು ಸರಬರಾಜಿಗೆ ಮಾಡಬೇಕಾದ ವ್ಯವಸ್ಥೆಗಳನ್ನೊಳಗೊಂಡಂತೆ ವಸತಿ ನಿವೇಶನಗಳು, ರಸ್ತೆ ಪಂಕ್ತೀಕರಣ, ಉದ್ಯಾನವನ, ನಾಗರೀಕ ಸೌಲಭ್ಯ ನಿವೇಶನದ ಪ್ರದೇಶ, ನಾಲಾ ಪ್ರದೇಶ, ಮಳೆನೀರು ಸಂಗ್ರಹಣೆ ಘಟಕ (Rain water Harvesting), Sewage Treatment Plant (ಘನತ್ಯಾಜ್ಯ ನೀರು ಸಂಸ್ಕರಣಾ ಘಟಕ)/ ಸೋಕ್‌ಪಿಟ್ ಮತ್ತು ಯಾವುದೇ ಇತರೆ ಮೂಲ ಸೌಕರ್ಯವನ್ನು ತೋರಿಸಿ ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ಮಾತ್ರ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡಿಸಿ, ವಸತಿ ವಿನ್ಯಾಸ ನಕ್ಷೆಗೆ "ತಾತ್ಕಾಲಿಕ ಅನುಮೋದನೆ" ನೀಡಲಾಗಿದೆ.

### -: ನಿಬಂಧನೆಗಳು :-

1) ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ 02 ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ವಸತಿ ವಿನ್ಯಾಸದ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸದಿದ್ದಲ್ಲಿ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2) ಪ್ರಾಧಿಕಾರಕ್ಕೆ ಸಮಾಧಾನವಾಗುವಂತೆ ಮಟ್ಟ ಮಾಡುವುದು, ನೆಲಗಟ್ಟು ಹಾಸುವುದು, ಜಲ್ಲಿಕಲ್ಲನ್ನು ಹಾಸುವುದು, ಕಲ್ಲು ಚಪ್ಪಡಿ ಹಾಕುವುದು, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಮೋರಿಗಳ ನಿರ್ಮಾಣ, ಬೀದಿದೀಪದ ವ್ಯವಸ್ಥೆ ಮತ್ತು ನೀರು ಸರಬರಾಜಿಗೆ ಮಾಡಬೇಕಾದ ವ್ಯವಸ್ಥೆಯನ್ನೊಳಗೊಂಡಂತೆ ವಸತಿ ನಿವೇಶನಗಳು, ರಸ್ತೆ ಪಂಕ್ತೀಕರಣ, ಉದ್ಯಾನವನ, ನಾಗರೀಕ ಸೌಲಭ್ಯ ಪ್ರದೇಶ ಮತ್ತು ಯಾವುದೇ ಇತರೇ ಮೂಲ ಸೌಕರ್ಯವನ್ನು ತೋರಿಸಿ, ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ನಿಯಮಿಸಬಹುದಾದ ಅಂಥ ನಿಯಮಗಳಿಗೆ ಅನುಸಾರವಾಗಿ ಅಭಿವೃದ್ಧಿಪಡಿಸಲು ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಮಂಜೂರಾತಿಯನ್ನು ನೀಡಲಾಗಿದೆ.
3) ಮಾನ್ಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಎನ್‌ಡಿ(ವೈ) ಸಿಆರ್/169/2018-19 ದಿನಾಂಕ:11/03/2020 ರಲ್ಲಿ ದೊಡ್ಡಜಾಲ ಗ್ರಾಮದ ಸ.ನಂ. 105 & 106 ರ ಹಾಗೂ ದೊಡ್ಡಜಾಲ ಅಮಾನಿಕೆರೆ ಗ್ರಾಮದ ಸ.ನಂ. 63, 64, 65 ರ ಜಮೀನುಗಳ ಮಧ್ಯಭಾಗದಿಂದ ಹೋಗುತ್ತಿರುವ ಹದ್ದು ಗಿಡದ ಹಳ್ಳದ ಮೇಲೆ ಸೇತುವೆ ನಿರ್ಮಿಸಿಕೊಳ್ಳಲು ಅನುಮತಿ ನೀಡಿದ್ದು, ಸದರಿ ಅಧಿಕೃತ ಜ್ಞಾಪನಾ ಪತ್ರದಲ್ಲಿರುವ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
4) ತಾತ್ಕಾಲಿಕ ಅನುಮೋದನೆ ಆಗಿರುವ ವಸತಿ ವಿನ್ಯಾಸ ನಕ್ಷೆಯ ರೀತ್ಯ ಮಾಲೀಕನು ಯಾವುದೇ ಪರಿಹಾರವನ್ನು ಕ್ಲೇಮು ಮಾಡದೆಯೇ ಉಚಿತವಾಗಿ ನೋಂದಾಯಿತ ಪರಿತ್ಯಾಜನಾ ಪತ್ರದ ಮುಖಾಂತರ ನಾಗರೀಕ ಸೌಲಭ್ಯ ಪ್ರದೇಶಗಳನ್ನು ಈ ಪ್ರಾಧಿಕಾರಕ್ಕೆ ಹಾಗೂ ಸಾರ್ವಜನಿಕ ಉಪಯೋಗದ ರಸ್ತೆಗಳನ್ನು, ಉದ್ಯಾನವನವನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸತಕ್ಕದ್ದು ಹಾಗೂ ನಾಗರೀಕ ಸೌಲಭ್ಯದ ನಿವೇಶನಗಳಿಗೆ ಕಡ್ಡಾಯವಾಗಿ ನಾಮಫಲಕವನ್ನು ಅಳವಡಿಸತಕ್ಕದ್ದು. ನಾಗರೀಕ ಸೌಲಭ್ಯ ನಿವೇಶನ ಮತ್ತು ಉದ್ಯಾನವನ

ಪ್ರದೇಶಗಳಿಗೆ Basement ಒಳಗೊಂಡಂತೆ Chain link Fencing ಅಳವಡಿಸಿ ಸಂರಕ್ಷಿಸತಕ್ಕದ್ದು ಹಾಗೂ ಉದ್ಯಾನವನ & ನಾಗರೀಕ ಸೌಲಭ್ಯದ ನಿವೇಶನಗಳಿಗೆ ಕಡ್ಡಾಯವಾಗಿ ನಾಮಫಲಕವನ್ನು ಅಳವಡಿಸತಕ್ಕದ್ದು.

5) ಸಂಬಂಧಪಟ್ಟ ಪ್ರಾಧಿಕಾರದ/ಮಂಡಳಿ/ಇಲಾಖೆಯ ಮೇಲ್ವಿಚಾರಣೆಯ ಅಡಿಯಲ್ಲಿ, ಮೇಲೆ ಹೇಳಲಾದ ಎಲ್ಲಾ ಮೂಲ ಸೌಕರ್ಯಗಳನ್ನು ಒಳಗೊಂಡ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಕ್ಕಾಗಿ ಸಂಬಂಧಪಟ್ಟ ಪ್ರಾಧಿಕಾರ/ ಮಂಡಳಿ/ ಇಲಾಖೆಯಿಂದ ಕಾರ್ಯಪೂರ್ತಿ ಪ್ರಮಾಣ ಪತ್ರವನ್ನು ಪಡೆದು ಮತ್ತು ನಾಗರೀಕ ಸೌಲಭ್ಯದ ನಿವೇಶನ ಪ್ರದೇಶವನ್ನು ಈ ಪ್ರಾಧಿಕಾರಕ್ಕೆ ಹಾಗೂ ಉದ್ಯಾನವನ & ರಸ್ತೆ ಪ್ರದೇಶಗಳನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ಬಿಟುಕೊಟ್ಟ ಬಗ್ಗೆ ದಾಖಲೆಗಳನ್ನು ಸಲ್ಲಿಸತಕ್ಕದ್ದು,

6) ಅನುಮೋದಿತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆಯ ರೀತ್ಯ ಅನುಮೋದನೆ ನೀಡಿದ 02 ವರ್ಷಗಳೊಳಗಾಗಿ ಸಂಪೂರ್ಣವಾಗಿ ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕಗಳನ್ನು ಅಭಿವೃದ್ಧಿಪಡಿಸತಕ್ಕದ್ದು.

7) ವಸತಿ ವಿನ್ಯಾಸದ ಗಡಿ ನಿರ್ಧಾರ ಮತ್ತು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ನಕ್ಷೆಯನ್ನು ಬಿಡುಗಡೆ ಮಾಡಲಾಗಿದ್ದು, ವಸತಿ ವಿನ್ಯಾಸದಲ್ಲಿನ ನಿವೇಶಗಳನ್ನು ಪರಭಾರೆ ಮಾಡುವುದಾಗಲೀ ಮತ್ತು ಖಾತೆ ತೆರೆಯುವುದಾಗಲೀ ಮಾಡತಕ್ಕದ್ದಲ್ಲ. ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿರುವ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಮಾಡುವ ಸಂಬಂಧ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಿ, ನಿವೇಶನಗಳನ್ನು ನೋಂದಣಿಗಾಗಿ ಬಿಡುಗಡೆಗೊಳಿಸುವವರೆಗೆ ಸದರಿ ನಿವೇಶನದಲ್ಲಿನ ಕಟ್ಟಡ ನಕ್ಷೆಗಳಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಅಥವಾ ಲೈಸೆನ್ಸನ್ನು ಮಂಜೂರು ಮಾಡತಕ್ಕದ್ದಲ್ಲ ಅಥವಾ ನೀಡತಕ್ಕದ್ದಲ್ಲ.

8) ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ-2016 ರ ಕಲಂ (3) ಮತ್ತು (4) ರ ರೀತ್ಯ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ದಲ್ಲಿ ವಸತಿ ಯೋಜನೆಯ ಪೂರ್ವಭಾವಿ ನೋಂದಣಿಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.

9) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ water (Prevention and Control of Pollution) Act 1974 ರ ಕಲಂ 25 ರ ರೀತ್ಯ ಸೂಕ್ತ ಪ್ರಮಾಣದ Sewage Treatment Plant (ತ್ಯಾಜ್ಯನೀರು ಸಂಸ್ಕರಣಾ ಘಟಕ) ಸ್ಥಾಪಿಸಲು consent for Establishment ಪೂರ್ವಾನುಮತಿ ಪಡೆಯದೇ ಪ್ರಶ್ನಿತ ನಿವೇಶನ / ಜಾಗದಲ್ಲಿ ನೆಲ ಅಗಿಯುವಿಕೆ ಒಳಗೊಂಡಂತೆ ಯಾವುದೇ ರೀತಿಯ ಕಟ್ಟಡ ನಿರ್ಮಾಣ ಅಥವಾ ವಸತಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದಲ್ಲ. ಉದ್ದೇಶಿತ ಕಟ್ಟಡ / ನೆಲ ಅಭಿವೃದ್ಧಿ ಕಾಮಗಾರಿಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ consent for Establishment ಅನುಮತಿ ಪಡೆಯತಕ್ಕದ್ದು.

10) ಪ್ರಸ್ತಾವಿತ ವಸತಿ ವಿನ್ಯಾಸದಲ್ಲಿನ ನಿವೇಶನದಾರರಿಗೆ ನೀರು ಸರಬರಾಜು, STP/ಸೆಪ್ಟಿಕ್ ಟ್ಯಾಂಕ್ ಮುಂತಾದ ಮೂಲಭೂತ ಸೌಕರ್ಯಗಳನ್ನು ವಸತಿ ವಿನ್ಯಾಸದ ಮಾಲೀಕರು ಒದಗಿಸತಕ್ಕದ್ದು.

11) ಪ್ರಶ್ನಿತ ಜಮೀನುಗಳಲ್ಲಿ ಸರ್ಕಾರಿ ಖರಾಬು ಜಾಗವನ್ನು ಯಥಾವತ್ತಾಗಿ ಕಾಯ್ದಿರಿಸತಕ್ಕದ್ದು ಹಾಗೂ ಈ ಜಾಗವನ್ನು ಒತ್ತುವರಿ ಮಾಡುವುದು ಅಥವಾ ಇತರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

12) ಅರ್ಜಿದಾರರು ಉದ್ದೇಶಿಸಿರುವ ಜಮೀನುಗಳಲ್ಲಿ ಸರ್ಕಾರದ ಅಥವಾ ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

13) ಈ ಅನುಮೋದನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17 ರಡಿಯಲ್ಲಿ ನೀಡುತ್ತಿರುವುದರಿಂದ ಇದನ್ನು ಜಮೀನುಗಳ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸತಕ್ಕದ್ದಲ್ಲ.

14) ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯಲ್ಲಿನ ನಿವೇಶನಗಳನ್ನು ಯಾವುದೇ ಉಪವಿಭಜನೆ ಮಾಡಿ ಮಾರಾಟ ಮಾಡತಕ್ಕದ್ದಲ್ಲ, ಒಂದು ವೇಳೆ ಯಾವುದೇ ಬದಲಾವಣೆಯ ಅವಶ್ಯಕತೆ ಇದ್ದಲ್ಲಿ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯತಕ್ಕದ್ದು. ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆಯನ್ನು ಮಾಡಬಾರದು.

15) ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರುವುದು.

16) ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ರಸ್ತೆ, ರಸ್ತೆಬದಿ ಚರಂಡಿ, ಕಲ್‌ವರ್ಟ್‌ಗಳು, ಪಾದಚಾರಿ ಮಾರ್ಗ ಇತ್ಯಾದಿ ಸಿವಿಲ್ ಕಾಮಗಾರಿಗಳನ್ನು ಸಂಬಂಧಿತ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ/ನಗರ ಸ್ಥಳೀಯ ಸಂಸ್ಥೆಯ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ, ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಕಾಮಗಾರಿ ದೃಢೀಕರಣ ಪತ್ರ ಸಲ್ಲಿಸತಕ್ಕದ್ದು.

17) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಾಮಗಾರಿಗಳನ್ನು ಸಂಬಂಧಿತ ಸ್ಥಳೀಯ ಸಂಸ್ಥೆ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಕಾಮಗಾರಿ ದೃಢೀಕರಣ ಪತ್ರ ಸಲ್ಲಿಸತಕ್ಕದ್ದು.

18) ಸದರಿ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ವಿದ್ಯುದ್ಧೀಕರಣ ಕಾಮಗಾರಿಗಳನ್ನು ಸಂಬಂಧಿತ ಬೆಸ್ಕಾಂ ಮಂಡಳಿ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಕಾಮಗಾರಿ ದೃಢೀಕರಣ ಪತ್ರ ಸಲ್ಲಿಸತಕ್ಕದ್ದು.

19) ಪ್ರಸ್ತಾಪಿತ ವಸತಿ ವಿನ್ಯಾಸದಲ್ಲಿ ಘನ ತ್ಯಾಜ್ಯಗಳನ್ನು ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.

20) ಅಭಿವೃದ್ದಿದಾರರು ಕೊಳಚೆ ನೀರನ್ನು ಬಯಲು ಜಾಗ/ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಅನ್ಯ ಉದ್ದೇಶಗಳಿಗೆ ಬಳಕೆ ಮಾಡತಕ್ಕದ್ದು.

21) ಅಭಿವೃದ್ಧಿದಾರರು ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ ಪ್ರದೇಶದಲ್ಲಿ ವಿವಿಧ ಜಾತಿಯ ಗಿಡಮರಗಳನ್ನು ಬೆಳಸಿ ಅಭಿವೃದ್ದಿಪಡಿಸುವುದು ಹಾಗೂ ಉದ್ಯಾನವನ ಉದ್ದೇಶಕ್ಕಾಗಿ ಕಾಯ್ದಿರಿಸಿ ಉಪಯೋಗಿಸತಕ್ಕದ್ದು ಬೇರೆ ಯಾವುದೇ ಉದ್ದೇಶಗಳಿಗೆ ಬದಲಾಯಿಸಬಾರದು. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡು ಕಡೆ ಗಿಡ/ಹೊಸದಾಗಿ ಗಿಡ/ಮರಗಳನ್ನು ಬೆಳೆಸುವುದು.

22) ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸದಲ್ಲಿನ ಪ್ರದೇಶದಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಸತಿ ವಿನ್ಯಾಸದಲ್ಲಿ ಅಂತರ್ಜಲ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

23) ತಾತ್ಕಾಲಿಕ ಅನುಮೋದಿತ ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.

24) ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

25) ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಸತಿ ವಿನ್ಯಾಸ ನಕ್ಷೆಗೆ ನೀಡಿರುವ ತಾತ್ಕಾಲಿಕ ಅನುಮೋದನೆ ತಂತಾನೇ ಸ್ವಯಂಚಾಲಿತವಾಗಿ ರದ್ದಾಗುತ್ತದೆ.

26) ಮೇಲಿನಂತೆ ನೀಡಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.

27) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 209 ಬಿಎಂಆರ್ 2016, ದಿನಾಂಕ: 31/03/2017 ರ ರೀತ್ಯ ಪತ್ರಿಕೆ, ಮಾಧ್ಯಮ, ಜಾಹಿರಾತು ಪ್ರಕಟಣೆಗಳಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಹೆಸರನ್ನು

ದುರ್ಬಳಕೆ ಮಾಡಿಕೊಳ್ಳುವಂತಿಲ್ಲ. ತಪ್ಪು ಮಾಹಿತಿ ಪ್ರಕಟಿಸದೇ ಅನುಮೋದನೆ ಮಾಡಿಕೊಂಡಿರುವ ಯೋಜನಾ ಪ್ರಾಧಿಕಾರದ ಹೆಸರನ್ನು ಮಾತ್ರ ನಮೂದಿಸತಕ್ಕದ್ದು.

28) ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ/ನಾಲಾ ಮುಂತಾದವುಗಳಿಗೆ ವಿನ್ಯಾಸದ ಮಲೀನ ನೀರನ್ನು ಬಿಡಬಾರದು. ಸರ್ಕಾರದ ಅಧಿಸೂಚನೆ ಸಂ. ಯುಡಿಡಿ15ಟಿಟಿಪಿ2015, ದಿನಾಂಕ: 21/04/2020 ರ ರೀತ್ಯ ಜಲಪ್ರದೇಶಗಳ ಬಫರ್ ಜಾಗದಲ್ಲಿ water pumping stations, Walking tracks, Play fields without any building constructions, cycling trucks & Parks ಗಳನ್ನು ಮಾತ್ರ ಅಭಿವೃದ್ಧಿಪಡಿಸತಕ್ಕದ್ದು.

29) ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಇತರೆ ಯಾವುದೇ ಪ್ರಾಧಿಕಾರವು ವಿಧಿಸಿರುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.

ಅರ್ಜಿದಾರರು ವಿನ್ಯಾಸದಲ್ಲಿನ ಕಾಮಗಾರಿಗಳನ್ನು ಒಟ್ಟಾರೆಯಾಗಿ ಅಭಿವೃದ್ಧಿಪಡಿಸಿದ ನಂತರ, ಸದರಿ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ಪಡೆಯುವ ಪೂರ್ವದಲ್ಲಿ ವಸತಿ ವಿನ್ಯಾಸದಲ್ಲಿನ ಉದ್ಯಾನವನ ಬಯಲು ಪ್ರದೇಶ ಹಾಗೂ ರಸ್ತೆಗಳನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯ ನಿವೇಶನವನ್ನು ಈ ಪ್ರಾಧಿಕಾರಕ್ಕೆ ನೋಂದಾಯಿತ ಪರಿತ್ಯಾಜನಾ ಪತ್ರಗಳ ಮುಖಾಂತರ ಪ್ರತ್ಯೇಕವಾಗಿ, ಪುಕ್ಕಟೆಯಾಗಿ ಹಸ್ತಾಂತರಿಸಿ, ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ವಿವಿಧ ಇಲಾಖೆಗಳಿಂದ ಅಂದರೆ ನೀರು ಸರಬರಾಜು, ಒಳಚರಂಡಿ Soak pit ಅಭಿವೃದ್ಧಿಪಡಿಸಿರುವ ಬಗ್ಗೆ ಗ್ರಾಮೀಣ ನೀರು ಸರಬರಾಜು ಇಲಾಖೆಯಿಂದ, ರಸ್ತೆ ಕಾಮಗಾರಿಗಳು, ಮಳೆನೀರು ಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ, ವಿದ್ಯುತ್ ಸರಬರಾಜು ಮಾಡಿರುವ ಬಗ್ಗೆ ಬೆಸ್ಕಾಂನಿಂದ, ಉದ್ಯಾನವನ ಅಭಿವೃದ್ಧಿಪಡಿಸಿರುವ ಬಗ್ಗೆ ತೋಟಗಾರಿಕೆ ಇಲಾಖೆಯಿಂದ ಹಾಗೂ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ಪ್ರಮಾಣ ಪತ್ರ ಹಾಗೂ ವಿನ್ಯಾಸದಲ್ಲಿ ಮೂಲಭೂತ ಸೌಲಭ್ಯಗಳು ಮತ್ತು ಸಾರ್ವಜನಿಕ ಪ್ರದೇಶಗಳ ನಿರ್ವಹಣೆ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ಕಾಮಗಾರಿ ಮುಕ್ತಾಯ ಪತ್ರವನ್ನು ಪಡೆದು ಸಲ್ಲಿಸಿ, ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ಹಾಗೂ ನಿವೇಶನಗಳ ಬಿಡುಗಡೆಗೆ ಮನವಿ ಸಲ್ಲಿಸತಕ್ಕದ್ದು.

05/11/24

**ಲಗತ್ತು:-**
ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಮಾತ್ರ ನೀಡಲಾಗಿರುವ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ.

**ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,**
**ಹಾಗೂ ಸದಸ್ಯ ಕಾರ್ಯದರ್ಶಿಗಳು,**
ಬೆಂಗಳೂರು ಅಂತರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ.

**ರವರಿಗೆ,**

ಶ್ರೀ ಶ್ರೀರಾಂ ಮಹೇಶ್ ಬಾಬು ಬಿನ್ ಬಾಲಸುಬ್ಬರಾಯುಡು,
ಎಸ್.ಎಸ್.ಇ ಪ್ರಾಜೆಕ್ಟ್ಸ್ ಪ್ರೈ.ಲಿ. ರವರ ಪರವಾಗಿ
ನಿರ್ದೇಶಕರು ಶ್ರೀ ಶ್ರೀರಾಂ ಮಹೇಶ್ ಬಾಬು ಬಿನ್
ಬಾಲಸುಬ್ಬರಾಯುಡು,ಶ್ರೀ ಎನ್. ಶಿವಣ್ಣ ಬಿನ್ ಲೇ॥
ನಾರಾಯಣಸ್ವಾಮಿ ರವರ ಪರವಾಗಿ ಜಿಪಿಎದಾರರು/ಜಂಟಿ
ಅಭಿವೃದ್ಧಿದಾರರಾದ ಎಸ್.ಎಸ್.ಇ ಪ್ರಾಜೆಕ್ಟ್ಸ್ ಪ್ರೈ.ಲಿ. ರವರ
ಪರವಾಗಿ ನಿರ್ದೇಶಕರು ಶ್ರೀ ಶ್ರೀರಾಂ ಮಹೇಶ್ ಬಾಬು ಬಿನ್
ಬಾಲಸುಬ್ಬರಾಯುಡು,
ನಂ. 533, 3ನೇ ಮಹಡಿ, ಸ್ಕಂದ ಆರ್ಕಿಡ್, 60 ಅಡಿ ರಸ್ತೆ,
'ಎಫ್' ಬ್ಲಾಕ್, ಸಹಕಾರನಗರ, ಬೆಂಗಳೂರು-560092